ಬಂದು ಕೂರುತ್ತಿದ್ದಂತೆ ಭಾಸ್ಕರರಾಯರೂ ತಮ್ಮ ತಳ್ಳು ಕುರ್ಚಿಯನ್ನು ತಳ್ಳಿಕೊಂಡು ಮೊದಲಿದ್ದ ಜಾಗಕ್ಕೇ ಬಂದರು.

'ನೀವೇನೂ ಯೋಚನೆ ಮಾಡುವುದು ಬೇಡ. ಇನ್ನೊಂದು ವಾರದಲ್ಲಿ ನಾನು ಎಲ್ಲವನ್ನೂ ಸರಿಪಡಿಸುತ್ತೇನೆ. ಅವರು... ಅದೇ ನಿನ್ನ ಚಿಕ್ಕಪ್ಪನ ಮಕ್ಕಳು ಅದೇನ್ ಕಿಸ್ಕಳ್ತಾರೋ ಕಿಸ್ಕೊಳ್ಳಲಿ. ನನ್ನ ಇಬ್ಬರು ಮಕ್ಕಳೂ ಗೌರೀಪುರದಲ್ಲಿದ್ದಾರೆ. ಒಬ್ಬ ಅದೇ ನಿನಗೆ ಹಾಸ್ಟೆಲ್‌ನಲ್ಲಿ ಉಳಿಯಲು ಅವಕಾಶ ಮಾಡಿಕೊಟ್ಟನಲ್ಲಾ... ಅವನೇ ನಡೆಸುತ್ತಿರುವ ಹಾಸ್ಟೆಲ್ ಅದು. ಇನ್ನೊಬ್ಬ ಮಗ ಡಿ.ವೈ.ಎಸ್.ಪಿ. ಆಗಿದ್ದಾನೆ. ಅವನಿಗೆ ಹೇಳಿ ಈ ನಿನ್ನ ಚಿಕ್ಕಪ್ಪನ ಮಕ್ಕಳಿಗೆ ಸರಿಯಾದ ಶಾಸ್ತಿ ಮಾಡಿಸುತ್ತೇನೆ' ಎಂದ ಭಾಸ್ಕರರಾಯರು 'ಮುಂದಿನ ವಾರ ನಿನ್ನ ಚಿಕ್ಕಮ್ಮನನ್ನು ಕಳುಹಿಸು. ನಿಮ್ಮ ಮನೆಯಿಂದ ಆ ನಿನ್ನ ಚಿಕ್ಕಪ್ಪನ ಮಕ್ಕಳನ್ನು ಹೊರದಬ್ಬಿಸಿ ಮನೆಯ ಕೀಲಿಕೈ ತರಿಸಿ ಇಟ್ಟುಕೊಂಡಿ ರುತ್ತೇನೆ. ತೆಗೆದುಕೊಂಡು ಹೋಗಬಹುದು' ದೃಢವಾದ ಸ್ವರದಲ್ಲಿ ಅಂದರು ಭಾಸ್ಕರರಾಯರು.

'ಚಿಕ್ಕಮ್ಮನೇ ಬರಬೇಕಾ ಕೀಲಿ ಒಯ್ಯುವುದಕ್ಕೆ..ನಾವು ಬಂದರೆ ಆಗದಾ?' ಕೇಳಲೋ ಬೇಡವೋ ಎಂದು ಅನುಮಾನಿಸುತ್ತಾ ಕೇಳಿದೆ.

'ನೀನು... ನೀನು ಬೇಡ.. ಈ ನಿನ್ನ ಚಿಕ್ಕಪ್ಪನ ಮಗಳು... ನಿನ್ನ ತಂಗಿ ಬಂದರೆ ಆದೀತೋ ನೋಡುತ್ತೇನೆ... ಒಂದ್ ಹತ್ತು ಹದಿನೈದು ನಿಮಿಷ ನೀನು ಹೊರಗಿರು. ನಾನೂ ಆ ಕೋಣೆಯೊಳಗೆ ಹೋಗಿರುತ್ತೇನೆ. ಅದೇ... ಅಲ್ಲಿ ಹಾಸಿಗೆಯಲ್ಲಿ ಹಾಸಿಗೆಯಾಗಿ ಮಲಗಿದ್ದಾಳಲ್ಲಾ ನನ್ನ ಹೆಂಡತಿ... ಆಕೆ ಉಟ್ಟಿರೋ ಸೀರೆಯನ್ನು, ತೊಟ್ಟಿರೋ ಬಟ್ಟೆಯನ್ನು ಬದಲಾಯಿಸದೆ ತಿಂಗಳ ಮೇಲಾಯಿತು. ನಿನ್ನ ತಂಗಿ ಆ ನನ್ನ ಹೆಂಡತಿಯ ವಸ್ತ್ರ ಬದಲಿಸಿ, ಆ ಮಂಚ ತುಸು ಕ್ಲೀನ್ ಮಾಡಿದರೆ... ನಿನ್ನ ಚಿಕ್ಕಮ್ಮ ಬಂದಾಗ ಇದೇ ಕೆಲಸ ಮಾಡುತ್ತಿದ್ದಳು. ಸಂಜೆಯ ತನಕ ಇಲ್ಲಿಯೇ ಇದ್ದು ಇವಳ ಸೇವೆ ಮಾಡಿ ಹೋಗುತ್ತಿದ್ದಳು. ತನ್ನ ಅಮ್ಮನಂತೆಯೇ ಇವಳೂ ನನ್ನಾಕೆಯ ಸೇವೆ ಮಾಡುತ್ತಾಳೆಯೋ ನೋಡೋಣ' ಎಂದರು ಭಾಸ್ಕರರಾಯರು.

ನಾನು ಮಂಗಲಾಳ ಮುಖ ನೋಡಿದೆ.

ಅನುಮಾನದಿಂದ ನನ್ನ ಮುಖ ನೋಡಿದಳು ಮಂಗಲಾ.

'ಆ ಕೆಲಸ ನಿನ್ನಿಂದ ಆಗದೇ ಇದ್ದರೆ ಬೇಡ ಬಿಡು ತಂಗೀ... ಇಷ್ಟೇ ದಿನಾ ಆಯಿತು. ನಾಳೆ ನಾಡಿದ್ದು ಯಾರಾದರೂ ಬಂದಾರು...' ಮಂಗಲಾ ಅನುಮಾನಿಸುತ್ತಿರುವುದನ್ನು ಗಮನಿಸಿ ಅಂದರು ಭಾಸ್ಕರರಾಯರು

'ಅದಕ್ಕಲ್ಲ... ಆ ಕೆಲಸ ನಾನು ಮಾಡುತ್ತೇನೆ' ಎಂದಳು ಮಂಗಲಾ.

'ಓಹ್... ನಾನು... ಗಂಡಸು... ಆ ಕೋಣೆಗೆ ಹೋಗಿರುತ್ತೇನೆ ಎಂದು ಹೇಳಿ ಅಲ್ಲಿ ಹೋದವನು ಬಂದು ನಿನಗೆ ತೊಂದರೆ ಮಾಡಬಹುದು ಅಂತಾನಾ? ಅಯ್ಯೋ ತಂಗೀ... ನನ್ನ ಗಂಡಸ್ತನ ಹೋಗಿ ಹದಿನೈದಿಪ್ಪತ್ತು ವರ್ಷಗಳ ಮೇಲಾಯಿತು. ಅಗೋ... ಅಲ್ಲಿ ಮಲಗಿದ್ದಾಳಲ್ಲಾ... ನನ್ನ ಹೆಂಡತಿ ಅಂದೆನಲ್ಲಾ... ಆಕೆಗೆ ಪಾರ್ಶ್ವ. ಅವಳ ಎಡಭಾಗ ಸ್ವಾಧೀನದಲ್ಲಿಲ್ಲ. ಆಕೆಯ ಕತೆ ಹಾಗಿದ್ದರೆ... ನನ್ನದು... ನನ್ನ ಮುಂಡದ ಕೆಳಭಾಗ ಸ್ವಾಧೀನದಲ್ಲಿಲ್ಲ. ಹೆಚ್ಚು ಕಡಿಮೆ ನಾವಿಬ್ಬರೂ ಅರ್ಧ ದೇಹ ಸ್ವಾಧೀನ ಕಳೆದುಕೊಂಡವರು. ಇದ್ದದ್ದರಲ್ಲಿ ನಾನು ತುಸು ವಾಸಿ... ಈ ತಳ್ಳು ಕುರ್ಚಿ ನೂಕಿಕೊಂಡು ಈ ಕೋಣೆಯಲ್ಲಿ ಸುತ್ತುತ್ತೇನೆ. ಆ ಕಿರು ಕೋಣೆಗೆ ಹೋಗಿ ಸ್ನಾನ ಗೀನ ಮಾಡಿ, ಬಟ್ಟೆ ಬದಲಿಸಿಕೊಂಡು ಬರುತ್ತೇನೆ.